ಸರಳವಾದ ಸಂಬಂಧ ಅಲ್ಲ ಅದು... 'ವೇಳಿ' ಎನ್ನುವುದು ಕೂಡ ಅಷ್ಟು ಸರಳವಾದ ವಿವರಣೆ ಅಲ್ಲ. 'ವೇಳಿ' ಅಂದರೆ ಮದುವೆ ಅಂತ ಅರ್ಥ ಬರೆದಿದ್ದಾರೆ. ಹೀಗೆ, 'ವೇಳಿ' ಎಂದರೆ, ನಂಬೂದಿರಿ ಬ್ರಾಹ್ಮಣರು ಸ್ವಜಾತೀಯ ಕನ್ಯೆಯೊಡನೆ, ನಂಬೂದಿರಿ ಬ್ರಾಹ್ಮಣರ ಹಿರಿಯ ಮಗ ಸ್ವಜಾತೀಯ ಕನ್ಯೆಯೊಡನೆ ಆಗುವ ಮದುವೆಯನ್ನು 'ವೇಳಿ' ಎಂದು ಹೇಳುತ್ತಾರೆ. ಇದನ್ನೇ ಬಷೀರ್ ತಮ್ಮ ಕಥೆಗಳಲ್ಲಿ 'ತಾನು ಮದುವೆಯಾದ ಹೆಂಡತಿ ತನ್ನ ಜಾತಿಯವಳೇ ಎನ್ನುವ ಕಾರಣಕ್ಕೆ ಹೆಂಡತಿಯನ್ನು 'ವೇಳಿ' ಎಂದೇ ಕರೆಯುವುದು. ಈ 'ವೇಳಿ' ಅಂತ ಕರೆಯುವ ಹಕ್ಕು ಇರುವುದು ನಂಬೂದಿರಿ ಬ್ರಾಹ್ಮಣರಿಗೆ ಮಾತ್ರ, ಬೇರೆಯವರಿಗೆ ಇಲ್ಲ.



ನಂಬೂದಿರಿ ಬ್ರಾಹ್ಮಣರ ಹಿರಿಯ ಮಗನನ್ನು ಬಿಟ್ಟು, ಉಳಿದವರೆಲ್ಲರೂ ನಾಯರ್ ಸ್ತ್ರೀಯರನ್ನು ಮದುವೆಯಾಗುವುದು. ಅದನ್ನು 'ಸಂಬಂಧ' ಅಂತ ಹೇಳಲಾಗುತ್ತದೆ. ಈ 'ಸಂಬಂಧ' ಹೇಗಿದೆ ಅಂದರೆ, ಅದಕ್ಕೆ ಚಾರಿತ್ರಿಕವಾದ ಕಾರಣವನ್ನು ಕೊಡುತ್ತಾರೆ. ಚೇರ-ಚೋಳರ ನಡುವೆ ಮಹೋದಯಪುರ ಯುದ್ಧ ನಡೆದಾಗ ಅಲ್ಲಿ ಚೇರರ ಎಲ್ಲಾ ಯುವಕರು ವೀರ ಮರಣವನ್ನಪ್ಪಿದರು. ಅವರ ಸಮುದಾಯದ ಹೆಣ್ಣುಮಕ್ಕಳಿಗೆ ಮುಂದೆ ಅವರ ಆಸ್ತಿಪಾಸ್ತಿಗಳಿಗೆ ವಾರಸುದಾರರು ಇಲ್ಲ ಎನ್ನುವ ಕಾರಣಕ್ಕಾಗಿ, ನಂಬೂದಿರಿ ಬ್ರಾಹ್ಮಣರು ತಮ್ಮ ಹಿರಿಯ ಮಗನೊಬ್ಬನನ್ನು ಬಿಟ್ಟು, ಉಳಿದವರಿಗೆ, ಅವರ ಜೊತೆ ಸಂಬಂಧ ಮಾಡಿಕೊಳ್ಳುವುದಕ್ಕೆ ವ್ಯವಸ್ಥೆ ಮಾಡಿಕೊಟ್ಟರು. ಹೀಗೆ, ಈ 'ಸಂಬಂಧ'ದ ಸ್ವರೂಪ ಬಂದಾಗ, ನಂಬೂದಿರಿ ಬ್ರಾಹ್ಮಣರ ಹಿರಿಯ ಮಗ, ಆತ ಪೌರೋಹಿತ್ಯಕ್ಕೆ ಅಧಿಕಾರ ಉಳಸಿಕೊಳ್ಳಲು ಸ್ವಜಾತೀಯ ಕನ್ಯೆಯರೊಡನೆ 'ವೇಳಿ' ಮಾಡಿಕೊಳ್ಳಲು ವ್ಯವಸ್ಥೆ ಮಾಡಲಾಯಿತು. ಹಾಗಾಗಿ ಪೌರೋಹಿತ್ಯವನ್ನು ಹಿರಿಯ ಮಗ ಮಾತ್ರ ಮಾಡಬೇಕು. ಉಳಿದವರು ಮಾಡುವ ಹಾಗಿಲ್ಲ. ಉಳಿದವರೆಲ್ಲರೂ ನಾಯರ್ ಕನ್ಯೆಯರೊಡನೆ 'ಸಂಬಂಧ'ವನ್ನು ಮಾಡಿಕೊಳ್ಳಲು ಅವಕಾಶ ಕಲ್ಪಿಸಲಾಯಿತು.

ನಾಯರ್ ಜಾತಿಯ ಹೆಣ್ಣುಮಗಳ ಮನೆಯಲ್ಲಿ 'ಸಂಬಂಧ' ಮಾಡಿಕೊಂಡ ನಂಬೂದಿರಿ ಬ್ರಾಹ್ಮಣ ಉಳಿದುಕೊಳ್ಳುವಂತಿಲ್ಲ. ಆಕೆ ಅಲ್ಲಿ ಅವನಿಗೆ ಊಟೋಪಚಾರ ಇತ್ಯಾದಿಗಳಿಗೆ ಪ್ರತ್ಯೇಕ ವ್ಯವಸ್ಥೆ ಮಾಡಿಕೊಡಬೇಕಾಗಿತ್ತು. ಹೀಗೆ, 'ಸಂಬಂಧ'ಗಳನ್ನು ಹೆಣ್ಣುಮಗಳ ಒಪ್ಪಿಗೆಯ ಮೇರೆಗೆ ಏರ್ಪಡಿಸಬೇಕಾಗಿತ್ತು. ಹೆಣ್ಣುಮಗಳ ಒಪ್ಪಿಗೆ ಇದ್ದರೆ ಮಾತ್ರ ಮುಂದುವರಿಸಬಹುದು. ಹಾಗೆಯೇ ಬೇಡವೆಂದರೆ ಇರುವ 'ಸಂಬಂಧ' ಮುರಿದು ಹೊಸ 'ಸಂಬಂಧ' ಮಾಡಿಕೊಳ್ಳಲೂಬಹುದು. ಈ ರೀತಿಯ ಒಂದು ಸಾಮಾಜಿಕ ವ್ಯವಸ್ಥೆ ಇತ್ತು. ಆಕೆಯ ಮನೆಯಲ್ಲಿ ಉಸ್ತುವಾರಿ ನೋಡಿಕೊಳ್ಳುವ ಸೋದರಮಾವನೇ ಹೆಚ್ಚಿನ ಸಂದರ್ಭಗಳಲ್ಲಿ ಎಲ್ಲವನ್ನು ನಿಯಂತ್ರಿಸುತ್ತಿದ್ದ. ಆಸ್ತಿ ವಿಲೇವಾರಿಯ ಹಕ್ಕು ಸೋದರಮಾನಿಗೆ ಇಲ್ಲವಾಗಿತ್ತು. ಆದರೆ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ವ್ಯವಹಾರಗಳಲ್ಲಿ ಸೋದರ ಮಾವನದೇ ಕೊನೆ ಮಾತು ಎಂಬಂತಿತ್ತು. ಪುರುಷಾಧಿಪತ್ಯವೇ ಜಾಸ್ತಿಯಾದ ಮಾತೃಮೂಲೀಯ ವ್ಯವಸ್ಥೆ ಇದು. ಆಸ್ತಿಯ ಹಕ್ಕು ಪೂರ್ಣವಾಗಿ ಹೆಣ್ಣು ಮಗಳಿಗೇ ಇದ್ದುದರಿಂದ ಮಾತೃಮೂಲೀಯ ವ್ಯವಸ್ಥೆ ಅಥವಾ 'ಮರುಮಕ್ಕತ್ತಾಯ' ಎಂದು ಹೇಳಲಾಗುತ್ತದೆ.

ಆಸ್ತಿಯ ಹಕ್ಕು ತಾಯಿಯಿಂದ ಮಗಳಿಗೆ ಮುಂದುವರಿಯುತ್ತದೆ. ಗಂಡುಮಕ್ಕಳಿಗೆ ಅವಕಾಶ ಇಲ್ಲ. ಯಾಕೆಂದರೆ, ಆ ಮಕ್ಕಳಿಗೆ ಹೆಣ್ಣಿನ ದೃಷ್ಟಿಯಿಂದ ತಾಯಿ ಒಬ್ಬಳೇ. ಗಂಡಿನ ದೃಷ್ಟಿಯಿಂದ ತಂದೆ ಅನೇಕರು. ಹಾಗಾಗಿ, ಆ ತಾಯಿಯ ಮಗಳಿಗೆ ಹಕ್ಕು ಎನ್ನುವುದು ಬಂದಿದೆ. ಮಾತೃಮೂಲೀಯ ವ್ಯವಸ್ಥೆಗೆ ಇದುವೇ ಮುಖ್ಯ ಕಾರಣ ಎಂದು ವಿದ್ವಾಂಸರು ಗುರುತಿಸಿದ್ದಿದೆ. ಇಂತಹ ವ್ಯವಸ್ಥೆಯ ಭಾಗವಾಗಿರುವ ಸಂಗತಿಗಳನ್ನು ಮರೆತು ಭಾಷಾಂತರ ಮಾಡಿದರೆ ಇವು ಯಾವುವೂ ಅರಿವಿಗೆ ಬರುವುದೇ ಇಲ್ಲ. ಒಟ್ಟಿಗೆ ಇದ್ದರೆ ಮದುವೆಯಾಯಿತು ಅಷ್ಟೇ. ಇಷ್ಟಕ್ಕೆ ಸರಳವಾಗಿ ಅರ್ಥಮಾಡಿಕೊಳ್ಳುವಂತೆ ಆಗುತ್ತದೆ. ಇಂತಹ ಅನೇಕ ಪರಿಭಾಷೆಗಳು ಯಾವುದೇ